ESTD : No. JRB/Cell.II/69/Regn-4876/77-78
Date : 09-12-1977

✆:080-26601442

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

THE BANGALORE CITY DIST. CO-OPERATIVE UNION LTD.,
' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018
E-mail: bcdcu1977@gmail.com

**ಜೆ. ಮಂಜುನಾಥ್**
ಅಧ್ಯಕ್ಷರು

**ಕೃಷ್ಣಪ್ಪ ಕೆ.ಸಿ.**
ಉಪಾಧ್ಯಕ್ಷರು

**ಗೌತಮ್ ಹೆಚ್.ಎನ್.**
ಖಜಾಂಚಿ

## ಪ್ರಕಟಣೆಗಾಗಿ

ಬೆಂಗಳೂರು :– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿ., ಬಿ.ಎಂ.ಟಿ.ಸಿ ನೌಕರರ ಪತ್ತಿನ ಸಹಕಾರ ಸಂಘ ನಿ., ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ: 24–01–2025 ರಂದು ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಒಂದು ದಿನದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ನಂ.1, ಕನ್ನಡ ಯುವಜನ ಸಂಘದ ಸಭಾಂಗಣ, ಹೆಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ವಿಲ್ಸನ್‌ಗಾರ್ಡನ್, ಬೆಂಗಳೂರು–560027 ಇಲ್ಲಿ ಏರ್ಪಡಿಸಲಾಗಿತ್ತು.

ಸಮಾರಂಭದ ಉದ್ಘಾಟನೆಯನ್ನು ಬಿ.ಎಂ.ಟಿ.ಸಿ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ದಿವಾಕರ್ ಹೆಚ್. ಇವರು ನೆರವೇರಿಸಿ ಮಾತನಾಡುತ್ತಾ, ಇತ್ತೀಚೆಗೆ ಸಹಕಾರ ಸಂಘಗಳಲ್ಲಿ ಚುನಾವಣೆಗಳು ಪ್ರಾರಂಭವಾಗುತ್ತಿದ್ದು, ಸಹಕಾರ ಸಂಘಗಳಲ್ಲಿ ಚುನಾವಣೆ ಕಾಯ್ದೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು, ಅಂತಹ ಚುನಾವಣಾ ಕಾಯ್ದೆಗಳ ಕುರಿತು ಸಂಪೂರ್ಣ ಮಾಹಿತಿಗಳನ್ನು ಇಂದಿನ ತರಬೇತಿ ಕಾರ್ಯಕ್ರಮದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳು ನೀಡಲಿದ್ದು, ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯಬೇಕು ಹಾಗೂ ಸಹಕಾರ ಸಂಘಗಳ ಚುನಾವಣೆಗಳು ಸರಾಗವಾಗಿ ನಡೆಯಲು ಎಲ್ಲರೂ ಸಹಕರಿಸಬೇಕೆಂದು ತಿಳಿಸಿದರು.

ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜೆ. ಮಂಜುನಾಥ್‌ರವರು ಮಾತನಾಡುತ್ತಾ, ಸಹಕಾರ ಸಂಘಗಳ ಸಹಕಾರ ಶಿಕ್ಷಣ ನಿಧಿಯನ್ನು 2% ಒಕ್ಕೂಟಗಳ ಮುಖಾಂತರ ಸಂಗ್ರಹಿಸಿದ ಶಿಕ್ಷಣ ನಿಧಿಯನ್ನು ಮಹಾಮಂಡಳದ ಖಾತೆಗೆ ಜಮಾಹಿಸಲಾಗಿದ್ದು ಮಹಾಮಂಡಳದ ಮಾನದಂಡೆಗಳ ಅನುದಾನದ ರೀತಿಯಲ್ಲಿ ನೀಡಿದಂತಹ ಮೊತ್ತವನ್ನು ಬಳಸಿಕೊಂಡು ಕೆರೆ ನೀರು ಕೆರೆಗೆ ಚಲ್ಲಿದಾಗೆ ನೀವು ನೀಡುವಂತಹ ಶಿಕ್ಷಣ ನಿಧಿಯನ್ನು ಬಳಸಿಕೊಂಡು ತರಬೇತಿಗಳನ್ನು ನೀಡುತ್ತಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಭಾಗವಹಿಸಬೇಕೆಂದು ತಿಳಿಸಿದರು.

............2

ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿರುವಂತಹ ಸಹಕಾರ ಸಂಘಗಳ ಸಹಾಯಕ ಅಪರ ನಿಬಂಧಕರಾದ ಶ್ರೀ ಶಶಿಧರ್ ಎಲೆ ಇವರು ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ವಸೂಲಾತಿ ಹಾಗೂ ಕಾನೂನು ಕ್ರಮಗಳ ಬಗ್ಗೆ ಕುರಿತು ಸಂಕ್ಷಿಪ್ತವಾಗಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಮತ್ತೊಬ್ಬ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಜಿವನ ಮತ್ತು ಆರೋಗ್ಯ ತರಬೇತಿಗಾರರು ಬೆಂಗಳೂರು ಶ್ರೀ ಸುಬ್ರಮಣ್ಯ ಕೆ. ರವರು ಒತ್ತಡ ನಿರ್ವಹಣೆ ಮತ್ತು ಸಂವಹನ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ಸದಸ್ಯರು ಇದರ ಸದುಪಯೋಗಪಡಿಸಿಕೊಂಡರು. ಪ್ರಾರಂಭದಲ್ಲಿ ಒಕ್ಕೂಟದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸವಿತಾ ಬಿಸನಾಳ ಇವರು ಸರ್ವರನ್ನೂ ಸ್ವಾಗತಿಸಿ ಕಾರ್ಯಕ್ರಮದ ಪ್ರಾಸ್ಥಾವಿಕ ಪರಿಚಯ ಮಾಡಿಕೊಟ್ಟರು ಹಾಗೂ ಕೊನೆಯಲ್ಲಿ ಶ್ರೀಮತಿ ಸಿ.ಎಂ ಲಕ್ಷ್ಮೀ ಜಿಲ್ಲಾ ಶಿಕ್ಷಕರು ಇವರು ಎಲ್ಲರಿಗೂ ವಂದಿಸಿದರು.

ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ.

